**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ. ಸಿ. ನಂ. 36/2024**

**ಚಾ.ಸಾಃ 18, ಫ್ರಾ.ಸಾಃ 7**

| | |
|---|---|
| ಸಾಕ್ಷಿದಾರನ ಹೆಸರು | ಸುರೇಶ ಕುಂಬಾರ |
| ತಂದೆಯ ಹೆಸರು | ಗಂಗಪ್ಪ ಕುಂಬಾರ |
| ವಯಸ್ಸು | 46 ವರ್ಷಗಳು |
| ಉದ್ಯೋಗ | ಸಿಪಿಐ, ರೇಲ್ವೇಸ್ ಹುಬ್ಬಳ್ಳಿ |
| ವಾಸ್ತವ್ಯ | ಹುಬ್ಬಳ್ಳಿ |

**ಸಾಕ್ಷಿಯನ್ನು ದಿನಾಂಕಃ 17-01-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ಫೆಬ್ರುವರಿ-2024 ರಿಂದ ಜುಲೈ 2024 ರ ವರೆಗೆ ಹೊನ್ನಾವರ ಪೋಲೀಸ್ ಠಾಣೆಯಲ್ಲಿ ಆರಕ್ಷಕ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 08-02-2024 ರಂದು ಕೇಸಿನ ಕಡತವನ್ನು ಚಾಸಾ-17 ರಿಂದ ಪಡೆದುಕೊಂಡು ಕಡತ ಪರಿಶೀಲಿಸಿರುತ್ತೇನೆ.

ದಿನಾಂಕ 28-03-2024 ರಂದು ಬೈಕ್ ಮಾಲೀಕರಾದ ಚಾಸಾ-6 ರವರಿಗೆ ಕಲಂ 133 ರಡಿಯಲ್ಲಿ ನೋಟೀಸು ನೀಡಿ ಉತ್ತರ ಪಡೆದುಕೊಂಡಿರುತ್ತೇನೆ. ನೋಟೀಸು ಮತ್ತು ಉತ್ತರವನ್ನು ನೋಡುತ್ತಿದ್ದು ನಿಪಿ-28 ಮತ್ತು 29 ಎಂದು ಗುರುತಿಸಲಾಯಿತು. ಅದೇದಿನ ಚಾಸಾ-6 ರವರ ಹೇಳಿಕೆ ಪಡೆದು, ಬೈಕಿಗೆ ಸಂಬಂಧಪಟ್ಟ ದಾಖಲೆಗಳನ್ನು ಪಡೆದು ಬೈಕನ್ನು ಅವರ ಮಧ್ಯಂತರ ಸ್ವಾದೀನಕ್ಕೆ ನೀಡಿರುತ್ತೇನೆ.

ದಿನಾಂಕ 10-04-2024 ರಂದು ಐಎಂವಿ ವರದಿಯನ್ನು ಪಡೆದಿರುತ್ತೇನೆ. ಈಗ ಅದನ್ನು ನೋಡುತ್ತಿದ್ದು ನಿಪಿ-30 ಎಂದು ಗುರುತಿಸಲಾಯಿತು. ತನಿಖೆ ಪೂರೈಸಿ ಆರೋಪಿ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಂ. ಎನ್. ಎಸ್. ರವರಿಂದಃ**

ನನ್ನ ತನಿಖೆಯ ಕಾಲಕ್ಕೆ ನಾನು ಅಪಘಾತಪಡಿಸಿದ ಕಾರನ್ನು ಪರಿಶೀಲಿಸಿರುವುದಿಲ್ಲ. ಬೈಕನ್ನು ಪರಿಶೀಲಿಸಿರುತ್ತೇನೆ. ಪಂಚನಾಮೆಯ ಕಾಲಕ್ಕೆ ತೆಗೆದಿದ್ದ ಫೋಟೋವನ್ನು ನಾನು ಪರಿಶೀಲಿಸಿರುತ್ತೇನೆ. ನಿಪಿ-4 ರಿಂದ 7 ರ ಫೋಟೋದಲ್ಲಿ ರಕ್ತದ ಮಾರ್ಕುಗಳಾಗಲೀ ಬ್ರೆಕಿನ ಮಾರ್ಕುಗಳಾಗಲೀ ಕಾಣುತ್ತಿಲ್ಲ. ನಿಡಿ-1 ಮತ್ತು 2 ರಲ್ಲಿ ರಕ್ತದ ಮಾರ್ಕುಗಳಾಗಲೀ ಬ್ರೆಕಿನ ಮಾರ್ಕುಗಳಾಗಲೀ ಸ್ಪಷ್ಟವಾಗಿ ಕಾಣುತ್ತಿಲ್ಲ. ಪಂಚನಾಮೆಯಲ್ಲಿ ಸ್ಥಳದಲ್ಲಿ ರಕ್ತ ಬಿದ್ದ ಬಗ್ಗೆ ಮತ್ತು ಟಯರ ಮಾರ್ಕ ಇರುವ ಬಗ್ಗೆ ನಮೂದು ಇದೆ. ಪಂಚನಾಮೆಯಲ್ಲಿ ನಮೂದಿಸಿರುವ ಟಯರ ಮಾರ್ಕಗಳು ಬೈಕಿನದೋ ಅಥವಾ ಕಾರಿನದೋ ಅಂತ ನಾನು ಯಾವುದೇ ತನಿಖೆ ಮಾಡಿಲ್ಲ. ಹಿಂದಿನ ತನಿಖಾಧಿಕಾರಿಗಳು ಈ ಬಗ್ಗೆ ತನಿಖೆ

ಮಾಡಿರಬಹುದಾದ್ದರಿಂದ ನಾನು ಪುನಃ ಈ ಬಗ್ಗೆ ತನಿಖೆ ಮಾಡಿಲ್ಲ. ನಾನು ಸರಿಯಾಗಿ ತನಿಖೆ ಮಾಡದೇ ಆರೋಪಿಯ ವಿರುದ್ಧ ಯಾವುದೇ ಆಪಾದನೆ ಕಂಡುಬರದೇ ಇದ್ದರೂ ಮೃತನ ಕುಟುಂಬದವರಿಗೆ ಸಹಾಯವಾಗಲಿ ಎನ್ನುವ ಉದ್ದೇಶಕ್ಕೆ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**